ಅತಿಗೆ ಹೋಗಿ ತಟಸ್ಥವಾದಂತಿತ್ತು. ಈಗ ಎರಡೂ ಅನುಭವಕ್ಕೆ ಬರುತ್ತಿಲ್ಲ. ಬಾಯಲ್ಲಿ ನೀರೂರುವುದೂ ನಿಂತು ಹೋಗಿತ್ತು. ಆದರೂ ಅಳು ಒತ್ತರಿಸಿ ಬರುತ್ತಿತ್ತು. ಐಲ್ಯಾಂಡಿಗೆ ಹೊಂದಿಸಿಟ್ಟ ಕುರ್ಚಿಯ ಮೇಲೆ ಶರಣಾಗತಳಾಗಿ ಕುಸಿದೆ. ಮೈ ನಖಶಿಖಾಂತ ನಡುಗುತ್ತಿತ್ತು. ಫೋನಿನಲ್ಲಿ ಕಣ್ಣು ಹಾಯಿಸಿದರೆ ಹಿಂದಿನ ರಾತ್ರಿಯೇ ತಲುಪಿದ ಎರಡು ಮೆಸೇಜುಗಳಿದ್ದವು.

ಒಂದು ಸುಹಾಸನದು. 'ಸೂಪರ್ರಾಗಿತ್ತು ಚಿನಾ ಇವತ್ತಿನ ಪಾರ್ಟಿ. ಲೆವೆನ್‌ಸ್ಕಿ ಬಹಳ ಸೊಗಸಾಗಿ ಮಾತನಾಡಿದ. ಎಷ್ಟೊಂದು ಪ್ರಭಾವೀ ಇನ್ವೆಸ್ಟರ್‌ಗಳ ಪರಿಚಯ ಆಯ್ತು ಅಂತೀ? ಇನ್ನು ನಮ್ಮ ಕನಸು ನನಸಾಗೋಕೆ ತುಂಬಾ ದಿನ ದೂರವಿಲ್ಲ. ತಿಳೀತಲ್ಲ? ನೀನು ಇವತ್ತಿನಿಂದಾನೇ ಬರ್ಥ್ ಕಂಟ್ರೋಲ್ ಮಾತ್ರೆ ನುಂಗೋದು ನಿಲ್ಲಿಸಿಬಿಡೋದಕ್ಕೆ ಅಡ್ಡಿಯಿಲ್ಲ' ಅಂತ ಕಣ್ಣು ಮಿಟುಕಿಸೋ ಎಮೋಜಿಯ ಜೊತೆಗೆ ಕಳುಹಿಸಿದ್ದ.

ಹೊಟ್ಟೆ ತೊಳೆಸಿದಂತಾಯಿತು.

ಇನ್ನೊಂದು ಸಂದೇಶ ಆಲಿಸನ್‌ಳದು. 'ಹೇಗಿತ್ತು ಕೇಕ್? ನನಗೊತ್ತು ಇಷ್ಟೊತ್ತಿಗೆ ನೀನು ಫ್ರಾಸ್ಟಿಂಗಿನಲ್ಲೇ ಮುಳುಗಿ ಒದ್ದಾಡ್ತಿರ್ತೀಯ ಅಂತ. ಭಯ ಬೇಡ. ನಾನೂ ಇಲ್ಲಿ ಅದನ್ನೇ ಮಾಡ್ತಿದೀನಿ' ಅಂತ ಬರೆದಿದ್ದಳು.

ಇವರಿಬ್ಬರೂ ಈ ಹೊತ್ತು ನನ್ನ ಮುಂದಿದ್ದರೆ ಆದದ್ದಾಗಲಿ ಅಂತ ಲಾಕರಿನಿಂದ ಗನ್ ತಂದು ಇವರಿಬ್ಬರನ್ನೂ ಒಂದೇಟಿಗೆ ಸುಟ್ಟು ಬಿಡುತ್ತಿದ್ದೇನೋ. ಹುಚ್ಚುಸೂಳೇಮಕ್ಕಳು, ಮುಂಡೆಮಕ್ಕಳು, ತಾಯಿಗ್ಗಂಡ, ನಾಯಿಬೋಳಿಮಕ್ಕಳು ಅಂತ ಗೊತ್ತಿರೋ ಬೈಗುಳವನ್ನೆಲ್ಲ ಹೇಳಿಕೊಂಡೆ. ಸಾಕಾಗಲಿಲ್ಲ. ಹಲ್ಕಾನನ್ಮಕ್ಕಳು ಅಂದೆ. ಊಹೂಂ. ಹಡಬೆಗೆಹುಟ್ಟಿದವರು ಅಂದೆ. ಊಹೂಂ. ಕಡೆಗೆ ನಾನೇ ಸೋತು ಸುಮ್ಮನಾಗಬೇಕಾಯಿತು.

ಚಾಕ್ಲೆಟ್ ಕೇಕಿನ ಪರಿಮಳ ಈಗ ಮನೆಯನ್ನಷ್ಟೇ ಅಲ್ಲ ನನ್ನೊಳಗನ್ನೂ ಆವರಿಸಿ, ಅದೂ ನಾನೂ ಬೇರೆ ಬೇರೆ ಅಲ್ಲವೇ ಅಲ್ಲ ಅನ್ನುವ ಹಾಗಾಗಿ ಹೋಗಿತ್ತು. ನಿರಾಸೆಯಿಂದ, ಹತಾಶೆಯಿಂದ ಪರಿಮಳ ಸೂಸುವ ಮೇಣದ ಬತ್ತಿಯೊಂದನ್ನು ಹಚ್ಚಿಟ್ಟು ಅಘ್ರಾಣಿಸಲು ಪ್ರಯತ್ನಿಸಿದೆ.

ಒಮ್ಮೆಲೇ ಫೋನು ದೊಡ್ಡಕೆ ಪರಿಚಿತ ಸ್ವರವೊಂದನ್ನು ಉಲಿಯ ಹತ್ತಿತು. ನನಗಂತೂ ಯಾರೋ ತಲೆಯ ಮೇಲೆ ಕಲ್ಲು ಎತ್ತಿ ಹಾಕಿದ ಹಾಗೆಯೇ ಆಯಿತು. ನೋಡಿದರೆ ಅಲರಾಂ. ಅಂದರೆ ಸಮಯ ಮುಂಜಾನೆ ಆರು ಗಂಟೆ. ದಿನವೂ ನಾನು ಜಾಗಿಂಗ್ ಹೋಗುವ ಸಮಯ.

ಮುಚ್ಚಿದ ಪರದೆಯಿಂದ ಬೆಳಕಿನ ಕಿರಣಗಳು ನಿಧಾನಕ್ಕೆ ಒಳ ಬರಲು ಹವಣಿಸುತ್ತಿದ್ದವು. ಅಲರಾಂ ಸದ್ದಿಗೆ ಕೀಲಿ ಕೊಟ್ಟಂತೆ ಎದ್ದು ಕೇಕಿನ ಮೇಲೊಂದು ಕಣ್ಣಿಟ್ಟೇ ರನ್ನಿಂಗ್ ಶೂಸು ಧರಿಸಿ, ಶರ್ಟಿನ ಮೇಲೊಂದು ಹೂಡಿ ಧರಿಸಿದೆ. ಆದರೂ ಕಾಲು ಐಲ್ಯಾಂಡಿನಿಂದ ದೂರ ಸರಿಯಲೇ ಒಲ್ಲದಾಗಿತ್ತು.

ಮುಟ್ಟಿದರೆ ಎಲ್ಲಿ ಕೈ-ಮೈಗಂಟಿಕೊಂಡು ಈ ಕೇಕು ನನ್ನ ಪ್ರಯತ್ನವೇ ಇಲ್ಲದೇ ನನ್ನೊಳಗೆ ನುಗ್ಗುತ್ತದೋ ಅಂತ ಭಯವಾಯಿತು. ಈಗ ನಾನು ಹೊರ ಹೋಗಿಯೇ ಬಿಟ್ಟರೂ ಜಾಗಿಂಗ್ ಮುಗಿಸಿ ಬಂದಾಗ ಇದು ಹೀಗೇ ಇಲ್ಲೇ ನಿಂತಿರುತ್ತದಲ್ಲ ಅಂತ ಸಂಕಟವಾಯಿತು. ಪಕ್ಕದಲ್ಲಿ ಆಗಷ್ಟೇ ನಾನೇ ಹಚ್ಚಿಟ್ಟಿದ್ದ ಸೆಂಟೆಡ್ ಕ್ಯಾಂಡಲ್ ಉರಿಯುತ್ತಿತ್ತು. ಕೇಕನ್ನೂ, ಮೇಣದಬತ್ತಿಯನ್ನೂ ನನ್ನ ಕಣ್ಣುಗಳು ಮುಳುಗುತ್ತಿರುವ ವ್ಯಕ್ತಿಯನ್ನು ದಂಡೆಯ ಮೇಲೆ ನಿಂತು ನೋಡುತ್ತಿರುವಂತೆ ದಿಟ್ಟಿಸಿದವು.

ಮುಂದೇನಾಯಿತು ಅಂತ ಹೇಗೆ ಹೇಳಲಿ? ನಿಧಾನಕ್ಕೆ ಗ್ಯಾಸಿನ ಬಳಿ ನನ್ನ ಕಾಲುಗಳು ಚಲಿಸಿದವು. ಬೆರಳುಗಳು ಸಣ್ಣದಾಗಿ ಗ್ಯಾಸ್ ಆನ್ ಮಾಡಿದವು. ಅಲ್ಲೆಲ್ಲ ನಾಜೂಕಾಗಿ ಗ್ಯಾಸಿನ ವಾಸನೆ ಪಸರಿಸತೊಡಗಿತು. ಮತ್ತೊಮ್ಮೆ ಗ್ಯಾಸನ್ನೂ, ಕೇಕನ್ನೂ, ಕ್ಯಾಂಡಲ್ಲನ್ನೂ ನನ್ನ ಕಣ್ಣುಗಳು ಏಕಾಗ್ರಚಿತ್ತದಲ್ಲಿ ದಿಟ್ಟಿಸಿದವು. ನುರಿತ ಕಲಾವಿದನೊಬ್ಬ ರಾತ್ರಿಯೆಲ್ಲ ತಲೆ ಕೆಡಿಸಿಕೊಂಡು, ಕಡೆಗೆ ಒಂದೇ ಒಂದು ಗೆರೆ ಎಳೆದು ಪೇಂಟಿಂಗ್ ಪೂರ್ಣವಾಯಿತೆಂದು ಸಂತೃಪ್ತಗೊಂಡ ಹಾಗೆ ನನ್ನ ತುಟಿಯಂಚಲ್ಲಿ ಬಾರೀಕಾದುದೊಂದು ನಗೆ ಮೂಡಿತು.

ಹೆಡ್ ಫೋನಿನಲ್ಲಿ ಹೆವೀ ಮೆಟಾಲಿಕಾ ಹಾಕಿಕೊಂಡು, ಬಾಗಿಲು ಲಾಕ್ ಮಾಡಿ ರಸ್ತೆಗಿಳಿದೆ. ಓಡಲು ತೊಡಗಿ ಅದೆಷ್ಟೋ ಕಾಲ ಕಳೆದಿರಬಹುದು. ಒಮ್ಮೆಲೇ ನನ್ನ ನಾಸಿಕ ಗಾಳಿಯಲ್ಲಿನ ಯಾವುದೋ ಜಾಡು ಹಿಡಿದು ನನ್ನನ್ನು ತಡೆದು ನಿಲ್ಲಿಸಿಬಿಟ್ಟಿತು.

ನಿಂತಿದ್ದೇ ತಡ, ಇಷ್ಟು ವರ್ಷ ಅದೆಲ್ಲಿತ್ತೋ, ದೂರದಲ್ಲೊಂದು ಬೇಕರಿ ಇದ್ದ ಹಾಗೆ ಚಾಕ್ಲೆಟ್ ಕೇಕಿನ ನಿಗಿನಿಗಿ ಘಮ ಮೆಲ್ಲಗೆ ನನ್ನ ಮೂಗನ್ನಡರಿಸಿತು. ●